# ಪ್ರೇಮ ಮಾರ್ಗ

ಧರ್ಮ ಎನ್ನುವುದು ತಲೆಯಮೇಲೆ ಹೊತ್ತು ತಿರುಗುವ ಹೊರೆಯಲ್ಲ. ಅದು ನಮ್ಮ ನಡೆಯೊಳಗೆ ಐಕ್ಯಗೊಂಡಿರುವಂಥದ್ದು. ಪರರಿಗೆ ಬದುಕಲು ಅವಕಾಶ ಕೊಡದ, ಜನರ ದುಃಖ ದುಮ್ಮಾನಗಳಿಗೆ ಕರಗದ ಧರ್ಮ ಮನುಷ್ಯರ ಹೃದಯಗಳಿಂದ ದೂರ ಉಳಿಯುತ್ತದೆ. ಸಮಾಜವನ್ನು ನರಕದೆಡೆಗೆ ಕೊಂಡೊಯ್ಯುತ್ತದೆ. ಅಂತಿಮವಾಗಿ ಧರ್ಮ ಎನ್ನುವುದು ದಯೆ, ಕರುಣೆಯ ಸಾಂಗತ್ಯದಲ್ಲಿ ಫಲ ನೀಡುವಂಥದ್ದು. ಸಂತರು, ಅನುಭಾವಿಗಳು ಜನತೆಯ ಕಲ್ಯಾಣವೇ ನಿಜವಾದ ಧರ್ಮ ಕಾರ್ಯ ಎಂದು ತಿಳಿದಿದ್ದರು. 'ಇದನ್ನೇ ದಯವೇ ಧರ್ಮದ ಮೂಲವಯ್ಯಾ...' ಎಂದು ಕನ್ನಡದ ಅನುಭಾವಿ ಪ್ರಜ್ಞೆ ಎರಡಿಲ್ಲದಂತೆ ನುಡಿದಿದೆ.

ಬೌದ್ಧ ಗುರುವೊಬ್ಬರು ಒಂದು ಸಲ, ಬುದ್ಧದೇವನ ವಚನಗಳನ್ನೆಲ್ಲಾ ಸಂಗ್ರಹಿಸಿ ಅದನ್ನು ಪ್ರತಿಮಾಡಿಸಿ ಜನರಿಗೆ ಹಂಚಬೇಕೆಂದು ಆಲೋಚಿಸಿದರು. ಇದಕ್ಕಾಗಿ ಅವರು ತಮ್ಮ ಶಿಷ್ಯರೊಂದಿಗೆ ಅನೇಕ ವರ್ಷಗಳ ಕಾಲ ಸುತ್ತಾಡಿ ಜನತೆಯಿಂದ ಬೇಡಿ, ಪ್ರತಿಮಾಡಿಸಲು ಅವಶ್ಯಕತೆ ಇರುವಷ್ಟು ಮಾತ್ರ ಹಣ ಸಂಗ್ರಹಿಸಿದರು. ಬುದ್ಧವಚನಗಳನ್ನು ಹೊತ್ತಗೆಯ ರೂಪದಲ್ಲಿ ಹೊರತರಲುಎಲ್ಲ ಸಿದ್ಧತೆಗಳನ್ನು ಮಾಡಿಕೊಂಡರು. ಇನ್ನೇನು ಕಾರ್ಯ ಆರಂಭಿಸಬೇಕು ಎನ್ನುವಷ್ಟರಲ್ಲಿ ಆ ಊರು ಬರಕ್ಕೆ ತುತ್ತಾಯಿತು. ಮಳೆಯಿಲ್ಲದೆ, ಬೆಳೆಯಿಲ್ಲದೆ, ಕುಡಿಯಲು ನೀರಿಲ್ಲದೆ ಜನ ಸಾಯತೊಡಗಿದರು. ದನ–ಕರುಗಳು ಮೇವು–ನೀರಿಲ್ಲದೆ ಅಸುನೀಗತೊಡಗಿದವು. ಇಡೀ ಊರು ಬರದಿಂದ ಸ್ಮಶಾನವಾಗತೊಡಗಿತು. ಅವರ ಬದುಕು ಬರ್ಬರವಾಗತೊಡಗಿತು! ಬರದ ಬವಣೆಯಿಂದ ಯಾತನೆಪಡುತ್ತಿದ್ದ ಜನರ ಕಷ್ಟಗಳನ್ನು ನೋಡಿದ ಬೌದ್ಧಗುರು, ಬುದ್ಧನ ವಚನಗಳ ಹೊತ್ತಗೆಯನ್ನು ತರುವುದಕ್ಕಿಂತ, ಜನತೆಯ ಸಂಕಟಕ್ಕೆ ನೆರವಾಗುವುದೇ ಎಲ್ಲ ಧರ್ಮಕಾರ್ಯಕ್ಕಿಂತ ಮಿಗಿಲು ಎಂದು ಭಾವಿಸಿದರು. ತಾವು ಬುದ್ಧ ವಚನವನ್ನು ಹೊತ್ತಗೆಯ ರೂಪದಲ್ಲಿ ಹೊರತರಲು ಸಂಗ್ರಹಿಸಿದ್ದ ಹಣವನ್ನೆಲ್ಲಾ ಹಿಂದೆಮುಂದೆ ನೋಡದೆ, ಬರಕ್ಕೆ ತುತ್ತಾಗಿದ್ದ ಊರಿನ ಜನತೆಯ ಕಲ್ಯಾಣಕ್ಕಾಗಿ, ದನ–ಕರುಗಳ ಮೇವು–ನೀರಿಗಾಗಿ ವಿನಿಯೋಗಿಸಿದರು. ಬೌದ್ಧ ಗುರುವಿನ ಈ ಪ್ರಯತ್ನದಿಂದಾಗಿ ಬರದಿಂದ ಸಾಯುವವರ ಸಂಖ್ಯೆ ಕಡಿಮೆಯಾಯಿತು. ರಾಸುಗಳಿಗೆ ಹುಲ್ಲು–ನೀರು ದೊರೆತು ಪರಿಸ್ಥಿತಿ ಸುಧಾರಿಸಿತು. ಜನತೆಗೆ ಎದುರಾಗಿದ್ದ ಮಹಾವಿಪತ್ತೊಂದು ಹೀಗೆ ಮರೆಯಾಯಿತು. ಸಂಕಟದ ಕಾಲ ಕಳೆದ ಮೇಲೆ ಎಲ್ಲವೂ ಮೊದಲಿನಂತಾಯಿತು. ಸತ್ಯವು ಪ್ರೇಮದ ಮೂಲಕ ಪ್ರಕಟಗೊಳ್ಳುತ್ತದೆ ಎನ್ನುವುದನ್ನು ಬೌದ್ಧಗುರುವಿನ ಈ ಚರ್ಯೆಯು ಅರಿವಿಗೆ ತರುತ್ತದೆ.

ಎಲ್ಲವೂ ಸುಧಾರಿಸಿದ ಮೇಲೆ, ಬಹುಕಾಲದಿಂದಲೂ ಗುರುವಿನ ಮನಸ್ಸಿನಲ್ಲಿದ್ದ ಬುದ್ಧ ವಚನಗಳ ಹೊತ್ತಗೆಯನ್ನು ಹೊರತರುವ ಬಯಕೆ ಮತ್ತೆ ಚಿಗುರಿತು. ಮತ್ತೆ ಕೆಲವು ವರ್ಷ ತನ್ನ ಶಿಷ್ಯರೊಂದಿಗೆ ಹಳ್ಳಿ ಹಳ್ಳಿಗಳಿಗೆ ಅಲೆದು, ಜನರಿಂದ ಬೇಡಿ ಹಣ ಸಂಗ್ರಹಿಸಿದರು. ಸಾಕಷ್ಟು ಪ್ರಮಾಣದಲ್ಲಿ ಹಣ ಸಂಗ್ರಹವಾದ ಮೇಲೆ, ಹೊತ್ತಗೆ ತರುವ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡರು. ಇನ್ನೇನು ಕಾರ್ಯ ಆರಂಭಗೊಳ್ಳಬೇಕು ಎನ್ನುವಷ್ಟರಲ್ಲಿ ಆ ಊರಿನಲ್ಲಿ ಎಂದೂ ಇಲ್ಲದಷ್ಟು ಮಳೆಯಾಗಿ, ದೊಡ್ಡ ಪ್ರವಾಹವೇ ಉಂಟಾಯಿತು. ಜನಗಳೆಲ್ಲ ತಮ್ಮ ಮನೆ–ಮಠಗಳನ್ನು ಕಳೆದುಕೊಂಡು ಅನಾಥರಾದರು. ಅವರ ದನ–ಕರುಗಳೆಲ್ಲಾ ಪ್ರವಾಹಕ್ಕೆ ಸಿಲುಕಿ ಕೊಚ್ಚಿಹೋದವು. ಜನರಿಗೆ ತಿನ್ನಲು ಅನ್ನ, ಕುಡಿಯಲು ನೀರು ಸಹ ದೊರೆಯದೆ ಹಾಹಾಕಾರವೇ ಉಂಟಾಯಿತು. ಜನರ ಈ ಸಂಕಟವನ್ನು ನೋಡಿದ ಗುರು ತಮ್ಮ ಶಿಷ್ಯರೊಂದಿಗೆ ಜನತೆಗೆ ನೆರವಾಗಲು ಧಾವಿಸಿ ಬಂದರು. ಬುದ್ಧ ವಚನಗಳ ಹೊತ್ತಗೆಗಾಗಿ ತಾವು ಸಂಗ್ರಹಿಸಿದ್ದ ಹಣವನ್ನೆಲ್ಲಾ ಪ್ರವಾಹಕ್ಕೆ ತುತ್ತಾಗಿ ಆಸರೆ ಕಳೆದುಕೊಂಡಿದ್ದ ಜನತೆಯ ಕಲ್ಯಾಣಕ್ಕಾಗಿ ವಿನಿಯೋಗಿಸಿದರು. ಇವರ ನೆರವಿನಿಂದ ಜನ ಬದುಕುಳಿದರು. ತಮ್ಮ ನೆರವಿಗೆ ಬಂದ ಗುರು ಮತ್ತು ಅವರ ಶಿಷ್ಯರ ಕಾರ್ಯಕ್ಷಮತೆಯನ್ನು ಜನ ಬಾಯಿತುಂಬಾ ಕೊಂಡಾಡಿದರು. ಇದು ಬೌದ್ಧ ಗುರುವಿಗೂ ನೆಮ್ಮದಿ, ಸಂತಸ ತಂದಿತು.

ಮತ್ತೆ ಕೆಲವು ವರ್ಷಗಳ ನಂತರ ಗುರುವಿನ ಮನಸ್ಸಿನಲ್ಲಿ ಮತ್ತೆ ಅದೇ ಆಸೆ ಮೊಳೆಯಿತು. ಈ ಸಲವೂ ಅವರು ತಮ್ಮ ಶಿಷ್ಯರೊಂದಿಗೆ ಹಲವಾರು ವರ್ಷಗಳ ಕಾಲ ಸುತ್ತಾಡಿ, ಜನರಿಂದ ಹಣ ಸಂಗ್ರಹಿಸಿದರು. ಗುರು ಮತ್ತು ಅವರ ಶಿಷ್ಯರ ಮಾನವೀಯ ನಡವಳಿಕೆಯನ್ನು ಕಣ್ಣಾರೆ ಕಂಡಿದ್ದ ಜನ ಅವರಿಗೆ ಹರಸಿ, ಕೈ ತುಂಬಾ ಹಣ ನೀಡಿದರು. ಹೊತ್ತಗೆ ತರವಷ್ಟು ಹಣ ಸಂಗ್ರಹವಾಯಿತು. ಈ ಸಲ ಯಾವ ಅಡ್ಡಿ ಆತಂಕಗಳೂ ಇಲ್ಲದೆ ಬುದ್ಧವಚನಗಳ ಹೊತ್ತಗೆ ಸುಂದರವಾಗಿ ಹೊರಬಂದಿತು. ಆ ಹೊತ್ತಗೆಗಳನ್ನು ಕೈಯಲ್ಲಿ ಹಿಡಿದಿದ್ದ ಗುರು ಅವುಗಳನ್ನೇ ನೋಡುತ್ತಾ ಬುದ್ಧ ವಚನಗಳ ಈ ಹೊಸ ಕೃತಿಗಿಂತ, ಇದರ ಹಿಂದಿನ ಎರಡು ಆವೃತ್ತಿಗಳೇ ಬಹಳ ಮೌಲಿಕವಾಗಿದ್ದವು ಎಂದು ಶಿಷ್ಯರಿಗೆ ಹೇಳಿದರಂತೆ! ಹೌದು, ಎಲ್ಲ ಸತ್ಯಾನ್ವೇಷಿಗಳೂ ನಡೆಯುವುದು ಪ್ರೇಮ ಮಾರ್ಗದಲ್ಲಿಯೇ.

ಧರ್ಮದಲ್ಲಿರುವ ಮಾನವೀಯತೆಯನ್ನು ಮೃದುಗೊಳಿಸಿ, ಅದು ವಿಪತ್ತಿನ ಕಾಲದಲ್ಲಿ ಅರಳುವಂತೆ ಮಾಡುವ ಹೂಗಾಳಿಯಂತಹ ರೂಪಕ ಇದು. ಕಾಠಿಣ್ಯತೆಯ ದಾರಿಯಲ್ಲಿ ನಮ್ಮ ಪೂರ್ವಿಕರು ನಮಗಾಗಿ ಬಿಟ್ಟುಹೋಗಿರುವ ಮಾನವ ಸಹಜವಾದ ನಡೆ ಇದು. ಉತ್ತಮನಾಗುವುದೆಂದರೆ ಬರಿ ನನ್ನ ದೃಷ್ಟಿಯಲ್ಲಾಗಲಿ ದೇವನ ದೃಷ್ಟಿಯಿಂದಾಗಲಿ, ಇಷ್ಟೇ ಅಲ್ಲ! ಜನರ ದೃಷ್ಟಿಯಿಂದಲೂ ಹಾಗಾಗಬೇಕು (ಮಹರ್ಷಿ ಟಾಲ್‌ಸ್ಟಾಯ್). ನಿಜವಾದ ಧರ್ಮ ಎನ್ನುವುದ ತರ್ಕ, ವಾದ–ವಿವಾದಗಳಲ್ಲಿ, ಹೆಬ್ಬೊತ್ತಿಗೆಗಳಲ್ಲಿ ಇರುವುದಿಲ್ಲ! ಅದು ಇರುವುದು ಲೋಕ ಕಾರುಣ್ಯದ ನಡೆಯಲ್ಲಿ. ಸ್ವಾರ್ಥ ಮತ್ತು ನಾನು ಮಾತ್ರ ಶ್ರೇಷ್ಠ ಎಂಬುದು ಎಲ್ಲ ಕೆಡುಕಿನ ಬೇರು. ನಮ್ಮ ನಡೆ ಮತ್ತು ಪ್ರಾರ್ಥನೆಯ ಎಲ್ಲ ಶಬ್ದಗಳೂ ಸರ್ವರ ಒಳಿತನ್ನೂ ಒಳಗೊಂಡಿರಬೇಕು. ಪ್ರಕ್ಷುಬ್ಧತೆಯಿಂದ ಬೇಯುತ್ತಿರುವ ಜಗತ್ತು, ಮನುಕುಲಕ್ಕೆ ಮುಕುಟಪ್ರಾಯ ಎನಿಸುವ ಇಂತಹ ಮಾನವತೆಯ ನಡೆಗಳನ್ನು ಒಳಗೊಂಡಲ್ಲಿ, ಅದು ಭೂಮಿಯನ್ನು ಫಲವತ್ತಾಗಿಸುತ್ತದೆ. ನಾವು ಹೆಚ್ಚು ಉದಾರಿಗಳೂ, ದಯಾಪರರೂ, ಕರುಣೆಯುಳ್ಳವರೂ ಆಗಿದ್ದರೆ, ಮಾನವತೆಯ ಒಳಿತಿನ ಬಳ್ಳಿ ಬಂದು ನಮ್ಮ ಕಾಲುಗಳಿಗೆ ತೊಡರಿಕೊಳ್ಳುತ್ತದೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ನಿರ್ಭಯವೂ ನಿಷ್ಪಕ್ಷಪಾತವೂ ಆದ ಜಗತ್ತಿನ ಅನ್ವೇಷಣೆಯೇ ವಿಜ್ಞಾನ.

  –ಸಿ.ವಿ. ರಾಮನ್

- ಒಳ್ಳೆಯದು ಉಳಿಯಬೇಕಾದರೆ ಕೆಟ್ಟವರೊಂದಿಗೆ ಹೋರಾಡಬೇಕು.

  –ಅನಕೃ

- ಪುಸ್ತಕಗಳು ಪ್ರತಿಯೊಬ್ಬರ ಮನಸ್ಸಿಗೂ ಪರಾಗವನ್ನು ಹೊತ್ತೊಯ್ಯುವ ದುಂಬಿಗಳು.

  –ಜೇಮ್ಸ್ ರಸೆಲ್

- ಎಲ್ಲ ನೈತಿಕ ಮೌಲ್ಯಗಳನ್ನು ಸೇರಿಸಿ ಎರಕ ಹೊಯ್ದ ಅತ್ಯಂತ ಉದಾತ್ತ ಮೌಲ್ಯವೆಂದರೆ ಪ್ರಾಮಾಣಿಕತೆ.

  –ಅಂಬೇಡ್ಕರ್

- ಜೀನಿಯಸ್ ಎಂದರೆ, ಸದ್ದಿಲ್ಲದೇ ಆವರಿಸಿಕೊಳ್ಳುತ್ತಿರುವ ವಸಂತದ ಹೊಸ್ತಿಲಲ್ಲಿ ರಾಬಿನ್ ಹಕ್ಕಿಯ ಹಾಡು.

  –ಖಲೀಲ್ ಗಿಬ್ರಾನ್

- ನೆರಳಿರುವಲ್ಲಿ ತಲೆಯೊಡ್ಡಿ ಉಸಿರಾಡಿಕೊಂಡಿರಬೇಕೆಂಬ ಬಾಳ್ವೆಯ ನಿರೀಕ್ಷೆ ಎಂತಹ ಹತಾಶ ಸ್ಥಿತಿಯಲ್ಲಿಯೂ ಮನುಷ್ಯನನ್ನು ಕಾಡುತ್ತದೆ.

  –ಶಿವರಾಂ ಕಾರಂತ

- ಜನ ನಡೆದಿದ್ದಾರೆ ಎಂದು ಸವೆದ ಹಾದಿಯಲ್ಲಿ ಹೋಗದಿರಿ, ನಿಮ್ಮದೇ ಹೊಸಹಾದಿಯನ್ನು ಸೃಷ್ಟಿಸಿಕೊಂಡು ಮುನ್ನಡೆಯಿರಿ.

  –ಗೌತಮ ಬುದ್ಧ